O.S.No. 207/2007 P W - 2

ದಿನಾಂಕ 18.08.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ. A.R.K. ವಕೀಲರಿಂದ ಃ

ನಾನು ಮತ್ತು ವಾದಿಗಳು ಸಂಬಂಧಿಕರು ಎಂದರೆ ಸರಿಯಲ್ಲ. ವಾದಿಗಳ ತಂದೆ ಮತ್ತು ನಾವುಗಳು ದಾಯಾದಿಗಳಾಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಾಂಗ್ರೆಸ್ ಪಕ್ಷದವನು ವಾದಿಗಳು ಜನತಾದಳ ಪಕ್ಷದವರು ಎಂದರೆ ಸರಿಯಲ್ಲ. ನಮಗೂ ಮತ್ತು ವಾದಿಗಳ ಮಧ್ಯೆ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿಗಳು ಬೇರೆ ಬೇರೆ ಊರುಗಳು ಎಂದರೆ ಸರಿಯಲ್ಲ. ನನಗೆ ಈಗ 58 ವರ್ಷಗಳಾಗಿದೆ. ವಾದಿಗಳ ಜಮೀನು ಎಲ್ಲೆಲ್ಲಿ ಇರುತ್ತದೆ ಎಂದು ನನಗೆ ಗೊತ್ತು. ಸರ್ವೆ ನಂ. 81/3 ರಲ್ಲಿ 2 ಎಕರೆ 20 ಗುಂಟೆ ಜಮೀನು ಕಾಡುಜಕ್ಕಸಂದ್ರ ಗ್ರಾಮಕ್ಕೆ ಸಂಬಂಧಪಟ್ಟಿರುತ್ತದೆ.ದಿನಾಂಕ 11.09.1933 ರಲ್ಲಿ ಸರ್ವೆ ನಂ. 81/3 ರಲ್ಲಿ 2 ಎಕರೆ 20 ಗುಂಟೆ ಪ್ರತಿವಾದಿಗಳ ಮಾವನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು 27 ಗುಂಟೆ ಮಾತ್ರ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 24.06.1950 ರಲ್ಲಿ ಸರ್ವೆ ನಂ. 81 ರಲ್ಲಿ 27 ಗುಂಟೆಯನ್ನು ಪ್ರತಿವಾದಿಗಳ ಮಾವನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎರಡು ಕ್ರಯಪತ್ರಗಳ ಮೂಲಕ 3 ಎಕರೆ 7 ಗುಂಟೆ ಜಮೀನನ್ನು ಪ್ರತಿವಾದಿಗಳ ಮಾವನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 81/3 ರ ಬದಲು 80 ಎಂ ದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಎರಡು ಎಕರೆ 20 ಗುಂಟೆ ಪ್ರತಿವಾದಿಗಳ ಮಾವನಿಗೆ ಕ್ರಯ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ

ಸ್ವತ್ತಿನ ಸ್ವಾಧೀನದಲ್ಲಿ ಪ್ರತಿವಾದಿಯವರೇ ಇರುತ್ತಾರೆ. ವಾದಿಗಳಿಂದ ಪ್ರತಿವಾದಿಗಳು ಬಲಪ್ರಯೋಗ ಮಾಡಿ ಯಾವಾಗ ಸ್ವಧೀನ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಅಕ್ಕ ಪಕ್ಕ ನಮ್ಮ ಜಮೀನು ಇರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ